ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಭಾಂಗಣದಲ್ಲಿ ದಿನಾಂಕ 20-1-2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂದನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಭರತ್‌ಲಾಲ್ ಮೀನಾ | ಸದಸ್ಯರು |
| 3. | ಶ್ರೀ ಪ್ರಿಯಾಂಕ ಎಂ. ಖರ್ಗೆ | ಸದಸ್ಯರು |
| 4. | ಶ್ರೀ ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 5. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 6. | ಡಾ. ಕೆ.ಎಸ್. ವರಪ್ರಸಾದ್ | ಸದಸ್ಯರು |
| 7. | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 8 | ಡಾ. ಡಿ.ಎಂ. ಚಂದರಗಿ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂದನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ಕಾರ್ಯಸೂಚಿಗಳ ಚರ್ಚೆಯು ಪ್ರಾರಂಭವಾಗುವುದಕ್ಕಿಂತ ಮುಂಚೆ ಎಲ್ಲಾ ಸದಸ್ಯರುಗಳು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರಾದ ಡಾ. ಪಿ.ಎಂ. ಸಾಲಿಮಠ ಮತ್ತು ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿಯವರಾದ ಡಾ. ಡಿ.ಎಂ. ಚಂದರಗಿ ಅವರುಗಳು ಪ್ರಥಮವಾಗಿ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಭಾಗವಹಿಸುತ್ತಿರುವುದರಿಂದ ಅವರುಗಳನ್ನು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಐಟಂ-1 | ದಿನಾಂಕ 20-9-2014 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು<br>**ಠರಾವು:**<br>ದಿನಾಂಕ 20-9-2014 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು (ಕ್ರಮ: ಕುಲಸಚಿವರು) |
| ಐಟಂ-2 | ದಿನಾಂಕ 20-9-2014 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು<br>**ಠರಾವು:**<br>ದಿನಾಂಕ 20-9-2014 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಭಾರತೀಯ ಸಂವಿಧಾನದ ಅನುಚ್ಛೇದ 371(ಜೆ) ಹಾಗೂ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶದವರಿಗಾಗಿ ನೇಮಕಾತಿಗಳಲ್ಲಿ ಮೀಸಲಾತಿ) ಆದೇಶ 2013 ರ ಪ್ರಕಾರ ಅಧಿಸೂಚಿಸಿದ ಅಧಿಸೂಚನೆ ಸಂ. ಕುಸ/ಕೃವಿವಿರಾ/ಆವಿ/2014-'15/3022 ದಿನಾಂಕ 3-11-2014 ಅನ್ನು ಅನುಮೋದಿಸುತ್ತಾ, ಈಗಾಗಲೇ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಯವರ ನೇಮಕಾತಿಗಾಗಿ ಹೊರಡಿಸಲಾದ ಜಾಹಿರಾತುಗಳ ಕಡತಗಳನ್ನು ಮುಚ್ಚಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಧರಿಸಿತು. ಈ ಕುರಿತು ಹೊಸದಾಗಿ ಜಾಹಿರಾತುಗಳನ್ನು ತಕ್ಷಣವೇ ಹೊರಡಿಸಲು ಸಲಹೆ ನೀಡಲಾಯಿತು.<br>(ಕ್ರಮ: ಕುಲಸಚಿವರು) |
| ಐಟಂ-3 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಐದನೇಯ ಘಟಿಕೋತ್ಸವಕ್ಕೆ ಅತಿಥಿಗಳನ್ನು ನಿಗದಿಪಡಿಸುವ ಕುರಿತು.<br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಐದನೇಯ ಘಟಿಕೋತ್ಸವಕ್ಕೆ ಅತಿಥಿಗಳ ಯಾದಿಗೆ ಸರ್ವಾನುಮತದಿಂದ ಘನ ವೇದಿಕೆಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು) |

| | |
|---|---|
| ಐಟಂ–4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2011–12 ಮತ್ತು 2012–13 ನೇ ಸಾಲಿನ ಲೆಕ್ಕ ಪರಿಶೋಧಿತ ವಾರ್ಷಿಕ ಖರ್ಚು–ವೆಚ್ಚಗಳು, ಲೆಕ್ಕ ಪರಿಶೋಧನಾ ವರದಿಗಳು ಹಾಗು ಅನುಸರಣಾ ವರದಿಗಳಿಗೆ ಅನುಮೋದನೆ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2011–12 ಮತ್ತು 2012–13 ನೇ ಸಾಲಿನ ಲೆಕ್ಕ ಪರಿಶೋಧಿತ ವಾರ್ಷಿಕ ಖರ್ಚು–ವೆಚ್ಚಗಳು, ಲೆಕ್ಕ ಪರಿಶೋಧನಾ ವರದಿಗಳು ಹಾಗೂ ಅನುಸರಣಾ ವರದಿಗಳಿಗೆ ಅನುಮೋದನೆ ನೀಡಲಾಯಿತು. 2012–13 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳ ಕುರಿತು ಚರ್ಚಿಸುತ್ತಾ, ಸದರಿ ಅವಧಿಯಲ್ಲಿ ಪ್ರಸ್ತಾಪಿಸಲಾದ ಹಾಗೂ ಯೋಜಿಸಲಾದ ಕಾರ್ಯಗಳ ಸ್ವರೂಪ ಮತ್ತು ಗುಣಮಟ್ಟದ ಕುರಿತು ಭೌತಿಕವಾಗಿ ಪರಿಶೀಲಿಸಿ ಪೂರ್ಣಗೊಳಿಸಿದ ವರದಿಗಳ ಪ್ರಕಾರ ಅವುಗಳು ಕ್ಷೇತ್ರಗಳಲ್ಲಿ ನಿಜವಾಗಿಯೂ ಇವೆಯೆಂಬುದನ್ನು ದೃಢಪಡಿಸಿಕೊಳ್ಳಲು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು. ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಬ್ಬರು ಸದಸ್ಯರುಗಳು ಹಾಗೂ ಕುಲಸಚಿವರಲ್ಲದೆ, ವಿಶ್ವವಿದ್ಯಾಲಯದಿಂದ ಹೊರತುಪಡಿಸಿ ಪಿ.ಡಬ್ಲ್ಯೂಡಿ. ಅಥವಾ ಇತರೇ ಕೃಷಿ ವಿಶ್ವವಿದ್ಯಾಲಯದಿಂದ ಒಬ್ಬ ಪರಿಣಿತ ಸದಸ್ಯನನ್ನು ಒಳಗೊಂಡ ಒಂದು ಉಪ–ಸಮಿತಿಯನ್ನು ರಚಿಸಲು ನಿರ್ಧರಿಸಲಾಯಿತು. ಸದರಿ ಸಮಿತಿಯು ಕಳೆದ ಐದು ವರ್ಷಗಳಲ್ಲಿ (2009–2014) ಕೈಗೊಳ್ಳಲಾದ ಕಾಮಗಾರಿಗಳ ಪರಿಶೀಲನೆ ಮಾಡಿ ಮೂರು ತಿಂಗಳೊಳಗಾಗಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅವಗಾಹನೆಗಾಗಿ ವರದಿ ಸಲ್ಲಿಸಲು ತಿಳಿಯಪಡಿಸಲಾಯಿತು.<br>**(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)** |
| ಐಟಂ–5 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.**<br>**ಠರಾವು:**<br>ವಿವರವಾದ ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸುವ ಯಾದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆಯುವಾಗ ಪ್ರಸ್ತಾಪಿಸಿದ ಉಪಕರಣಗಳ ವಿವರಗಳು ಹಾಗೂ ಸಮರ್ಥನೆಗಳನ್ನು ನಮೂದಿಸಲು ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br>**(ಕ್ರಮ : ಸರಕು ಖರೀದಿ ಅಧಿಕಾರಿಗಳು)** |
| ಐಟಂ–6 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಸದರಿ ವಿಷಯಗಳ ಕುರಿತು ಚರ್ಚಿಸುತ್ತಾ ಈ ಕೆಳಗಿನಂತೆ ಸಲಹೆ ನೀಡಲಾಯಿತು.<br>➢ ಎಲ್–1 ಕಾಂಟ್ರ್ಯಾಕ್ಟ್‌ದಾರರು ನಮೂದಿಸಿದ ಶೇಕಡ ಕಡಿಮೆ ದರದ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಜಮೆ ಮಾಡುವುದು.<br>➢ ಕಾಂಟ್ರ್ಯಾಕ್ಟ್‌ದಾರರು ಕಾಮಗಾರಿಗಳನ್ನು ಇನ್ನೊಬ್ಬರಿಗೆ ವಹಿಸಿಕೊಡುವ ಪ್ರವೃತ್ತಿಯನ್ನು ತಡೆಗಟ್ಟಲು ಕಾಂಟ್ರ್ಯಾಕ್ಟ್‌ದಾರರಿಗೆ ವಹಿಸಿಕೊಡಲಾದ ಕಾಮಗಾರಿಗಳನ್ನು ಅವರುಗಳೇ ನಿರ್ವಹಿಸುತ್ತಿದ್ದಾರೆಯೇ ಎಂಬುದನ್ನು ಪರಿವೀಕ್ಷಿಸುವುದು ಹಾಗೂ ಖಾತರಿಪಡಿಸಿಕೊಳ್ಳುವುದು.<br>➢ ಒಬ್ಬರೇ ಬಿಡ್ಡುದಾರರಿದ್ದ ಕಾಮಗಾರಿಗಳ ಅನುಮೋದನೆ ಪಡೆಯುವಾಗ, ಸೂಕ್ತ ಸಮರ್ಥನೆಗಳನ್ನು ನೀಡುವುದು.<br>**(ಕ್ರಮ : ಕುಲಸಚಿವರು / ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–7 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |

ಠರಾವು:

ವಿವರವಾದ ಚರ್ಚೆಯ ನಂತರ, ಯಾದಿಯಲ್ಲಿ ಹೊಸ ಸಿವಿಲ್ ಕಾಮಗಾರಿಗಳನ್ನು ಅನುದಾನದ ಲಭ್ಯತೆಯನುಸಾರ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಪ್ರಸ್ತಾಪಿತ ಉಗ್ರಾಣಗಳನ್ನು ನಿರ್ಮಿಸುವಾಗ ಉಗ್ರಾಣ ಕ್ರಮಬದ್ಧಗೊಳಿಸುವ ಪ್ರಾಧಿಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ವಿಶೇಷವಾಗಿ ಕನಿಷ್ಠ ಸಂಗ್ರಹಣಾ ಪ್ರಮಾಣದ ಬಗ್ಗೆ ಕಾಳಜಿ ವಹಿಸಿ ಉಗ್ರಾಣಗಳನ್ನು ನಿರ್ಮಿಸುವಾಗ ಸದರಿ ಮಾರ್ಗಸೂಚಿಗಳನ್ನು ಅನುಸರಿಸಲು ಮಂಡಳಿಯು ಸಲಹೆ ನೀಡಿತು.

(ಕ್ರಮ : ಕುಲಸಚಿವರು / ಕಾರ್ಯನಿರ್ವಾಹಕ ಅಭಿಯಂತರರು)

**ಐಟಂ– 8** **ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಸ್ವಬೀಜಾಭಿವೃದ್ಧಿ ಯೋಜನೆಯ ಅನುಷ್ಠಾನಕ್ಕೆ ಬೇಕಾಗುವ ಹಣಕಾಸಿಗೆ ಅನುಮೋದನೆ ಕುರಿತು**

ಠರಾವು:

ವಿಸ್ತೃತ ಚರ್ಚೆಯ ನಂತರ, ಐಟಂ. ಸಂ. 7 ರಲ್ಲಿ ಸೂಚಿಸಿದ ಮಾರ್ಗಸೂಚಿಗಳನ್ನು ಅನುಸರಿಸಲು ತಿಳಿಸುತ್ತಾ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು.

**(ಕ್ರಮ: ವಿಶೇಷಾಧಿಕಾರಿಗಳು (ಬೀಜ) / ಕಾರ್ಯನಿರ್ವಾಹಕ ಅಭಿಯಂತರರು)**

**ಐಟಂ– 9** **ಶ್ರೀ ಮಹಾದೇವ ರೆಡ್ಡಿ, ತಾಂತ್ರಿಕ ಅಧಿಕಾರಿಗಳು (ಕೃಷಿ ಹವಾಮಾನ), ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರು ಅವರ ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು**

ಠರಾವು:

ವಿವರವಾದ ಚರ್ಚೆಯ ನಂತರ, ಮರುಪಾವತಿಗಾಗಿ ನಾಲ್ಕನೇಯ ಹಣಕಾಸು ಸಮಿತಿಯ ಅನುಮೋದನೆ ಪಡೆದ ಮೊತ್ತದ ಶೇಕಡ 50% ರಷ್ಟು ಮೊತ್ತವನ್ನು ತಕ್ಷಣವೇ ಮರುಪಾವತಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು ಹಾಗೂ ಉಳಿದ ಮೊತ್ತವನ್ನು ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಅದನ್ನು ಸರಕಾರದ ಇಲಾಖೆಯಿಂದ ದೃಢಪಡಿಸಿಕೊಂಡ ನಂತರ ಮರುಪಾವತಿ ಮಾಡಲು ಮಂಡಳಿಯು ನಿರ್ಧರಿಸಿತು.

**(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)**

**ಐಟಂ– 10** **ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿ ಕುರಿತು**

ಠರಾವು:

ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000/– ರಿಂದ ಎ.ಜಿ.ಪಿ. ರೂ.7000/– ಕ್ಕೆ ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರ ಮುಂಬಡ್ತಿಗಾಗಿ ಘನ ವೇದಿಕೆಯು ಅನುಮೋದನೆ ನೀಡಿತು.

**(ಕ್ರಮ: ಕುಲಸಚಿವರು)**

**ಐಟಂ– 11** **ಗುತ್ತಿಗೆ ಆದಾರದ ಮೇಲೆ ತೊಡಗಿಸಿಕೊಂಡಿರುವ ಕೃಷಿ ಪದವೀಧರರ ಮಾಸಿಕ ಗೌರವಧನವನ್ನು ಹೆಚ್ಚಿಸುವ ಕುರಿತು.**

ಠರಾವು:

ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಗುತ್ತಿಗೆ ಆದಾರದ ಮೇಲೆ ತೊಡಗಿಸಿಕೊಂಡಿರುವ ಕೃಷಿ ಪದವೀಧರರ ಮಾಸಿಕ ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆಗೆ ಘನ ವೇದಿಕೆಯು ಈ ಕೆಳಗಿನಂತೆ ಅನುಮೋದನೆ ನೀಡಿತು.

| ಕ್ರ. ಸಂ. | ವಿಷಯ | ಪ್ರಸ್ತುತ ಮೊತ್ತ (ರೂ.) | ಹೆಚ್ಚಿಸಿದ ಮೊತ್ತ (ರೂ.) |
|---|---|---|---|
| 1 | ಸ್ನಾತಕ ಕೃಷಿ ಪದವೀಧರರು | 15,000/– ಪ್ರತಿ ತಿಂಗಳು | 18,000/– ಪ್ರತಿ ತಿಂಗಳು |
| 2 | ಸ್ನಾತಕೋತ್ತರ ಕೃಷಿ ಪದವೀಧರರು | 19,000/– ಪ್ರತಿ ತಿಂಗಳು | 22,000/– ಪ್ರತಿ ತಿಂಗಳು |
| 3 | ಪಿ.ಹೆಚ್.ಡಿ. ಕೃಷಿ ಪದವೀಧರರು | 21,000/– ಪ್ರತಿ ತಿಂಗಳು | 25,000/– ಪ್ರತಿ ತಿಂಗಳು |

**(ಕ್ರಮ: ಕುಲಸಚಿವರು)**

| ಐಟಂ–12 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು<br><br>ಠರಾವು:<br>➢ ಗುತ್ತಿಗೆ ಆಧಾರದ ಮೇಲೆ ಸಲಹೆಗಾರರ ಸೇವೆಗೆ ತೊಡಗಿಸಿಕೊಂಡಿರುವಂತಹರಲ್ಲಿ 65 ವರ್ಷ ವಯಸ್ಸು ಮೀರಿದವರ ಸೇವೆಯನ್ನು ಮುಂದುವರೆಸದಿರಲು ತೀರ್ಮಾನಿಸಲಾಯಿತು.<br>➢ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಐದು ವರ್ಷಗಳ ದೂರದೃಷ್ಟಿ ಯೋಜನೆಯನ್ನು (Perspective Plan) ತಯಾರಿಸಲು ನಿರ್ಧರಿಸಲಾಯಿತು. ಇದರಲ್ಲಿ ವಿಶ್ವವಿದ್ಯಾಲಯದ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಸೂಚಿಸಿ ರೂ. 25 ಕೋಟಿಗಳವರೆಗೆ ಯೋಜನೆ ತಯಾರಿಸಿ ಕರ್ನಾಟಕ ಸರಕಾರದ ಸಂಸ್ಥೆಗಳ ಅನುದಾನವನ್ನು ಪಡೆಯುವಲ್ಲಿ ಪ್ರಯತ್ನಿಸಲು ಸೂಚಿಸಲಾಯಿತು.<br>➢ ಗುತ್ತಿಗೆ ಆಧಾರದ ಮೇಲೆ 179 ದಿನಗಳ ಅವಧಿಗೆ ತೊಡಗಿಸಿಕೊಂಡಿರುವ ಸಿಬ್ಬಂದಿಯವರ ಹಿಂದಿನ ಸೇವೆಯನ್ನು ನೇಮಕಾತಿ / ಪದೋನ್ನತಿಗಾಗಿ ಪರಿಗಣಿಸುವುದನ್ನು ಚಾಲ್ತಿಯಲ್ಲಿರುವ ಸರಕಾರದ / ಐ.ಸಿ.ಎ.ಆರ್ / ಎಸ್.ಎ.ಯು. ನ ನಿಯಮಾವಳಿಗಳ ಅನುಸಾರ ಸೂಕ್ಷ್ಮವಾಗಿ ಪರಿಶೀಲಿಸಿ ಈ ಕುರಿತು ಕಾನೂನು ಸಲಹೆ ಪಡೆದು ಮೂರು ತಿಂಗಳೊಳಗಾಗಿ ಅಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ನಿರ್ಧರಿಸಲಾಯಿತು.<br>➢ ಕೃಷಿ ಮಹಾವಿದ್ಯಾಲಯ ಕಲಬುರ್ಗಿಯ 95 ಎಕರೆ ಜಮೀನಿಗೆ ಸಂಬಂಧಪಟ್ಟ ವಿಷಯವನ್ನು ಇತ್ಯರ್ಥಪಡಿಸಲು ಮಾನ್ಯ ಸದಸ್ಯರಾದ ಶ್ರೀ ಪ್ರಿಯಾಂಕ ಖರ್ಗೆಯವರು ಸಲಹೆ ನೀಡಿದರು.<br>➢ ಜಿಲ್ಲಾ ಕೃಷಿಕ ಸಮಾಜಕ್ಕೆ ಕೃವಿವಿಯ (50X80 ಅಡಿ) ಭೂಮಿಯನ್ನು ಕೊಡುವ ಕುರಿತು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹಿಂದಿನ ತೀರ್ಮಾನ ಗಣನೆಗೆ ತೆಗೆದುಕೊಂಡು ಅಂತಿಮವಾಗಿ ಇತ್ಯರ್ಥಪಡಿಸಲು ಸಲಹೆ ನೀಡಲಾಯಿತು.<br>(ಕ್ರಮ: ಕುಲಸಚಿವರು) |
|---|---|

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 22–1–2015 | ಸಹಿ /– 22–1–2015 |
|---|---|
| **(ಪಿ.ಎಂ. ಸಾಲಿಮಠ)** | **(ಡಿ.ಎಂ. ಚಂದರಗಿ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

21

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.